# ವಾರ್ತಾ ವಿಶ್ಲೇಷಣೆ

## ಅಕಾಲ ಮರಣಕ್ಕೆ ನಾವೆಷ್ಟು ಹೊಣೆ ?

ಆಧುನಿಕತೆ ಮತ್ತು ನಾಗರಿಕತೆಯ ಹೆಸರಿನಲ್ಲಿ ಹಣವಂತರು, ನಗರವಾಸಿಗಳು ಸುಖಸಾಧನಗಳನ್ನು ಹೆಚ್ಚಿಸಿಕೊಳ್ಳುತ್ತ ಬಂದಂತೆ ಅವರ ದೇಹದ ಆರೋಗ್ಯ ಕ್ಷೀಣಿಸುತ್ತಿರುವುದು ಗಮನಕ್ಕೆ ಬಂದಿದೆ. ಅದರೊಂದಿಗೆ ಹೆಚ್ಚುತ್ತಿರುವ ಸಾಮಾಜಿಕ ಸಮಸ್ಯೆಗಳು, ಕೌಟುಂಬಿಕ ಸಮಸ್ಯೆಗಳು ಹಾಗೂ ಒತ್ತಡಗಳು ಮಾನಸಿಕ ತೊಂದರೆ ಗಳಿಗೆ ಕಾರಣವೆಂದು ಅನೇಕರು ಖಡಾಖಂಡಿತವಾಗಿ ಹೇಳುವರು. ಆದರೆ ತಜ್ಞರ ಅಭಿಪ್ರಾಯದಂತೆ ಗ್ರಾಮಾಂತರ ಪ್ರದೇಶಗಳಿಗೂ ನಾಗರಿಕತೆಯ ದುಷ್ಪರಿಣಾಮಗಳು ಹರಡುತ್ತಿದ್ದು ಪರಿಸರ ಮಾಲಿನ್ಯವು ವ್ಯಾಪಕವಾದ ಹಾನಿಯನ್ನು ಉಂಟುಮಾಡುತ್ತಿದೆ. ಮೂಲಭೂತ ಸೌಲಭ್ಯಗಳೂ ಇಲ್ಲದ ಗ್ರಾಮಾಂತರ ಜನರ ಮೇಲೆ ನಾಗರಿಕತೆಯು ಒಡ್ಡುವ ಮಲಿನತೆಗೆ ಪರಿಹಾರ ಏನು? ದೂರ ದೃಷ್ಟಿಯಿಲ್ಲದೆ ಇಂದಿನ ಸುಖಕ್ಕಾಗಿ ನಾಳೆಗಳನ್ನು ಮಾರುವ ವಿದ್ಯಾವಂತರು ಪರಿಸರ, ಸಮಾಜ ಎಂಬ ಪದಗಳನ್ನೇ ಮರೆತಂತಿದೆ.

ಮಕ್ಕಳಲ್ಲಿ ಹೆಚ್ಚುತ್ತಿರುವ ದೈಹಿಕ-ಮಾನಸಿಕ ತೊಂದರೆಗಳ ಬಗ್ಗೆ ತಜ್ಞರು ಇದೀಗ ಸಂಶೋಧನೆ ನಡೆಸಿ ಪರಿಸರ ಮಾಲಿನ್ಯವೇ ಇದಕ್ಕೆ ಮೂಲ ಕಾರಣವೆಂದು ಕಂಡುಕೊಂಡಿದ್ದಾರೆ. ಸುಮಾರು ಒಂದು ಲಕ್ಷ ಮಕ್ಕಳು ಪರಿಸರ ಮಾಲಿನ್ಯ, ಕಲುಷಿತ ನೀರು, ರಸ್ತೆ ಅಪಘಾತಗಳು ಹಾಗೂ ದೇಹದಲ್ಲಿ ಅಧಿಕಗೊಳ್ಳುತ್ತಿರುವ ಸೀಸದ ಅಂಶದಿಂದ ಪ್ರತಿವರ್ಷ ಸಾಯುತ್ತಿದ್ದರೆ, ಸುಮಾರು ಮೂರರಲ್ಲಿ ಒಂದು ಭಾಗದಷ್ಟು ಮಕ್ಕಳು ನರಳುವ ವಿವಿಧ ಖಾಯಿಲೆಗಳಿಗೆ ಇವೇ ಕಾರಣವೆಂದು ತಜ್ಞರು ತೀರ್ಮಾನಿಸಿದ್ದಾರೆ. ನೀರಿನ ಕೊಳವೆ ಗಳಿಂದ, ಮನೆಗಳಿಗೆ ಬಳಸುವ ಬಣ್ಣಗಳಿಂದ ಹಾಗೂ ಗಿಡಮರ ಗಳಿಗೆ ಸಿಂಪಡಿಸುವ ರಾಸಾಯನಿಕ ವಸ್ತುಗಳಿಂದ ಸೀಸವು ದೇಹ ವನ್ನು ಸೇರುತ್ತಿದ್ದು ಹಲವರಲ್ಲಿ ಬುದ್ಧಿಮಾಂದ್ಯತೆಗೆ ಕಾರಣ ವಾಗಿದೆ. ವಿಷವಸ್ತುವಾದ ಸೀಸ ಸಣ್ಣಪ್ರಾಯದಲ್ಲೇ ದೇಹವನ್ನು ಪ್ರವೇಶಿಸಿ ಬಿಟ್ಟರೆ ಕಲಿಯುವಿಕೆ, ಏಕಾಗ್ರತೆ ಹಾಗೂ ಭಾಷೆಗಳನ್ನು ಕಲಿಯುವ ಕ್ರಿಯೆಗಳೆಲ್ಲ ಕುಂಠಿತವಾಗುತ್ತದೆ ಹಾಗೂ ರಕ್ತ ಹೀನತೆಯೂ ಉಂಟಾಗುತ್ತದೆ. ಮಕ್ಕಳ ಆರೋಗ್ಯತಜ್ಞರು ತಿಳಿಸಿರುವಂತೆ ಕಲಿಯುವಿಕೆಯಲ್ಲಿ ಹಿಂದುಳಿಯುವ ಮಕ್ಕಳಲ್ಲಿ ಅನೇಕರಲ್ಲಿ ಇದೇ ಕಾರಣವಾಗಿರುತ್ತದೆ.

ಇದಕ್ಕೆಲ್ಲ ಪರಿಹಾರವೆಲ್ಲಿ? ಯಾರು ಒದಗಿಸಬೇಕು? ಪ್ರತಿಯೊಬ್ಬ ವ್ಯಕ್ತಿಯೂ ಈ ವಿಷವಸ್ತುಗಳ ಪ್ರಯೋಗವನ್ನು ತನ್ನ ಕೈಲಾದಷ್ಟು ತಡೆದರೆ, ಪರಿಸರವನ್ನು ಕಾಪಾಡುವಲ್ಲಿ ಸಹಕರಿಸಿದರೆ ಸಮಾಜವು ನಿಶ್ಚಿತವಾಗಿ ಉತ್ತಮವಾಗುವುದಕ್ಕೆ ಸಾಧ್ಯ. ತೊಂದರೆ ಗಳು ನಮ್ಮ ಬಾಗಿಲಿಗೇ ಬರುವತನಕ ನಾವು ನಿದ್ರಿಸುವುದು ಸರಿಯೆಂದು ಭಾವಿಸುವವರಿಗೆ ಹೇಳಿ ಪ್ರಯೋಜನವೂ ಇಲ್ಲ ಬಿಡಿ.

ವಿ.ಪ್ರ

## ದೊಡ್ಡಣ್ಣನ ಹೀನಾಯ ಸ್ಥಿತಿ

ಅಬು ಘುರೈಬ್ ಸೆರೆಮನೆಯಲ್ಲಿ ಅಮೆರಿಕನ್ ಸೈನಿಕರ ಬರ್ಬರ ಕೃತ್ಯಗಳ ಚಿತ್ರಗಳು ಅಮೆರಿಕನ್ ನಾಗರಿಕರಿಗೆ ಮಾಮೂಲಾಗಿ ಹೋಗಿವೆ. ಇಂತಹ ವಿಷಯಗಳು ಅಮೆರಿಕನ್ನರ ನೈತಿಕ ಸೂಕ್ಷ್ಮತೆಗಳು ಮರೆಯಾಗುತ್ತಿರುವುದರ ಕುರುಹು ಎಂದು ಹೆರಿಟೇಜ್ ಪ್ರತಿಷ್ಠಾನದ ಉಪಾಧ್ಯಕ್ಷೆಯಾದ ರೆಬೆಕ್ಕಾ ಹ್ಯಾಗೆಲಿನ್ ಆತಂಕ ವ್ಯಕ್ತಪಡಿಸುತ್ತಾರೆ. ಎಲ್ಲ ದೇಶಗಳಿಗೂ ದೊಡ್ಡಣ್ಣನಂತೆ ಉಪದೇಶ ಕೊಡುವ ಈ ದೇಶ ತಾನೇ ಹೀನಾಯ ಸ್ಥಿತಿಯಲ್ಲಿದ್ದು ಎಲ್ಲ ನೈತಿಕ ಅಧಿಕಾರವನ್ನೂ ಕಳೆದುಕೊಂಡಿರುವುದು ಶೋಚನೀಯ. ರೆಬೆಕ್ಕಾ ಹೇಳುವಂತೆ, ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಆ ದೇಶದ ಅವನತಿಯ ಗತಿ ಕ್ಷಿಪ್ರವಾಗಿದೆ.

ಅಮೆರಿಕ ಒಂದು ಕ್ರಿಯಾಶೀಲ ರಾಷ್ಟ್ರವಾಗಿದ್ದು ನೈತಿಕ ಸಾತತ್ಯತೆ, ದೇವರಲ್ಲಿ ನಂಬಿಕೆ, ಸ್ವಾತಂತ್ರ್ಯಪ್ರಿಯತೆ, ಪ್ರಜಾ ಸ್ವಾಮ್ಯತೆ ಮುಂತಾದ ಮೌಲ್ಯಗಳನ್ನು ಇತಿಹಾಸದುದ್ದಕ್ಕೂ ಕಾಯ್ದುಕೊಂಡು ಬಂದಿರುವ ಒಂದು ದೇಶ. ಸಾಮಾಜಿಕವಾಗಿ ಮನುಷ್ಯನ ಘನತೆಯ ಬಗ್ಗೆ ಗೌರವ, ಮತ್ತು ಸಮಾನತೆ ಆ ದೇಶದಲ್ಲಿ ಎದ್ದು ಕಾಣುತ್ತವೆ. ಕೆಲವು ದಶಕಗಳ ಹಿಂದೆ ಬೈಬಲ್ಲಿನಲ್ಲಿ ಅಡಕವಾಗಿರುವ ಈ ತತ್ತ್ವ ಗಳನ್ನು ಶಾಲೆಯಲ್ಲಿ ಬೋಧಿಸಲಾಗುತ್ತಿತ್ತು. ಪ್ರಾರ್ಥನೆ ಎಂಬುದು ಬದುಕಿನ ಮಾಪಕವಾಗಿತ್ತು. ಈ ಎಲ್ಲವೂ ಬದಲಾದದ್ದು ಹೇಗೆ? ಈ ಅವನತಿಯು ಕಳೆದ ಶತಮಾನದ ೬೦ರ ದಶಕದಿಂದ ಪ್ರಾರಂಭ ವಾಯಿತೆಂದು ಹೇಳಬಹುದು ಎನ್ನುತ್ತಾರೆ, ರೆಬೆಕ್ಕಾ. ಮುಕ್ತವಾದ ಜೀವನವನ್ನು ಬಯಸಿ ಶಾಲೆಗಳಿಂದ ಪ್ರಾರ್ಥನೆ, ಹಾಗೂ ಬೈಬಲ್ಲಿನ ಮೌಲ್ಯಗಳನ್ನು ಕಿತ್ತೆಸೆದು ಖಾಲಿಯಾದ ಆ ಜಾಗದಲ್ಲಿ ಲೈಂಗಿಕತೆಯ ವಿಜೃಂಭಣೆ ಹಾಗೂ ನೈತಿಕ ಮೌಲ್ಯಗಳನ್ನು ಲೇವಡಿ ಮಾಡುವ ಕಾರ್ಯ ಎಂದು ಪ್ರಾರಂಭವಾಯಿತೊ ಅಂದಿನಿಂದಲೇ ಆ ದೇಶ ತನ್ನ ಎಲ್ಲ ಹಿರಿಮೆ ಗರಿಮೆಗಳನ್ನೂ ಕಳೆದುಕೊಂಡಿತು. ಇಂದು ಅಬೂ ಘುರೈಬ್‌ನಲ್ಲಿನ ಬರ್ಬರ ಕೃತ್ಯಗಳಿಂದ ಘಾಸಿಗೊಂಡ ಹಳೆ ತಲೆಮಾರಿನವರನ್ನು ಕಂಡು ಇಂದಿನ ಪೀಳಿಗೆಗೆ ಆಶ್ಚರ್ಯವಾಗುತ್ತಿದೆಯಂತೆ.

ಸಾಂಸ್ಕೃತಿಕವಾಗಿ, ಆಧ್ಯಾತ್ಮಿಕವಾಗಿ ಶ್ರೀಮಂತವಾಗಿರುವ ಭಾರತ ದೇಶದಲ್ಲಿರುವ "ಸಾಮ್ಯವಾದಿಗಳು" (communists) ಶಾಲಾ ಪಠ್ಯಪುಸ್ತಕಗಳಲ್ಲಿರುವ ದೇವರು, ಧರ್ಮ ಮುಂತಾದ ವಿಚಾರಗಳಿಗೆ ಸಂಬಂಧಿಸಿದ ಹಾಗೂ ಈ ರಾಷ್ಟ್ರದ ಸಾಂಸ್ಕೃತಿಕ ಹಿರಿಮೆಯನ್ನು ಎತ್ತಿ ಹಿಡಿಯುವ ಭಾಗಗಳನ್ನು ಕತ್ತರಿಸಿಹಾಕುವುದಲ್ಲಿ ಉದ್ಯುಕ್ತರಾಗಿರುವುದನ್ನು ಕಂಡು ನಗಬೇಕೋ ಅಳಬೇಕೋ ತಿಳಿಯದಾಗಿದೆ. ಈ ಮಹಾನ್ ಭಾರತದಲ್ಲಿ ಮಹಾಭಾರತದ ಖಳನಾಯಕ ದುರ್ಯೋಧನನ ಪಾತ್ರ ವಹಿಸಿರುವ ಧರ್ಮದ್ವೇಷಿಗಳೂ ಸಾಕಷ್ಟು ಇದ್ದಾರೆ. ಅಷ್ಟೇ ಅಲ್ಲ, ಅವರು ಈ ದೇಶದ ಕೆಲವೆಡೆ ಅಧಿಕಾರದ ಚುಕ್ಕಾಣಿಯನ್ನೂ ಹಿಡಿದಿರುವುದು ಯಾರಿಗೆ ತಾನೇ ಗೊತ್ತಿಲ್ಲ?

ವಿ.ಪ್ರ